## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ನಿಯಮ 72 ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಇಂಧನ ಸಚಿವರ ಉತ್ತರ

**ವಿಷಯ:** ಕಾರ್ಕಳ ತಾಲ್ಲೂಕಿನ ಇನ್ನಾ ಗ್ರಾಮದ ಮೂಲಕ ಹಾದು ಹೋಗುವ ಎಲ್ಲೂರು-ಕಾಸರಗೋಡು 400 ಕೆ.ವಿ ವಿದ್ಯುತ್ ಲೈನ್ ಯೋಜನೆಯ ಟವರ್ ನಿರ್ಮಾಣದಿಂದ ಗ್ರಾಮದ ನೂರಾರು ಎಕರೆ ಕೃಷಿ ಭೂಮಿಗೆ ಹಾನಿಯಾಗಲಿದ್ದು, ಮನೆ ನಿರ್ಮಾಣ ಸೇರಿದಂತೆ ಯಾವುದೇ ಮೂಲಭೂತ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಕೃಷಿಭೂಮಿಗೆ ತೊಂದರೆಯಾಗದ ರೀತಿಯಲ್ಲಿ ಈಗಿರುವ ಯೋಜನೆ ಕೈಬಿಟ್ಟು ತಮಿಳುನಾಡು ಮಾದರಿಯಲ್ಲಿ ವೈಜ್ಞಾನಿಕವಾಗಿ ನೆಲದಡಿಯಲ್ಲಿ ವಿದ್ಯುತ್ ಲೈನ್ ನಿರ್ಮಾಣ ಮಾಡುವ ಯೋಜನೆ ರೂಪಿಸುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಇಂಧನ ಮಂತ್ರಿಗಳ ಗಮನ ಸೆಳೆಯ ಬಗ್ಗೆ ಮಾನ್ಯ ಇಂಧನ ಸಚಿವರ ಹೇಳಿಕೆ.

* * * * *

**ಉತ್ತರ:** ಕಾರ್ಕಳ ತಾಲ್ಲೂಕಿನ ಇನ್ನಾ ಗ್ರಾಮದ ಮೂಲಕ ಹಾದು ಹೋಗುವ ಎಲ್ಲೂರು-ಕಾಸರಗೋಡು(ಉಡಪಿ-ಕಾಸರಗೋಡು) 400 ಕೆವಿ Double Circuit ವಿದ್ಯುತ್ ಪ್ರಸರಣ ಮಾರ್ಗವು ಅಂತರ ರಾಜ್ಯ ಪ್ರಸರಣಾ ಮಾರ್ಗವಾಗಿದ್ದು, ಸದರಿ ಮಾರ್ಗವನ್ನು ಕೇಂದ್ರ ಸರ್ಕಾರವು Tariff Based Competitive Bidding (TBCB) ಆಧಾರದಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಮಾರ್ಗವು ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಹಾದುಹೋಗುತ್ತಿದ್ದು, ರಾಜ್ಯದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 68 ಕಿ.ಮೀ. ಮಾರ್ಗ ರಚನೆಯಾಗಬೇಕಾಗಿರುತ್ತದೆ. ಈ ಮಾರ್ಗವು ಕೇಂದ್ರ ಸರ್ಕಾರದ ಪ್ರಸರಣಾ ಮಾರ್ಗವಾಗಿದ್ದರೂ ಸಹ, ಮಾರ್ಗ ರಚನೆಗೆ ಅಗತ್ಯವಿರುವ ರಹದಾರಿ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದು ಮತ್ತು ಪರಿಹಾರ ನಿಗದಿಪಡಿಸುವುದು ಇತ್ಯಾದಿಗಳ ಆಡಳಿತಾತ್ಮಕ ಸಹಕಾರವನ್ನು ರಾಜ್ಯ ಸರ್ಕಾರವು ನೀಡಬೇಕಾಗಿರುತ್ತದೆ.

ಪ್ರಸರಣಾ ಮಾರ್ಗ ಹಾದು ಹೋಗುವ ಪ್ರದೇಶದಲ್ಲಿ ಭೂಮಾಲೀಕರಿಗೆ ಅನುಕೂಲವಾಗುವಂತೆ ಮತ್ತು ಹೆಚ್ಚಿನ ಮರಗಳಿಗೆ ಹಾನಿಯಾಗುವುದನ್ನು ತಪ್ಪಿಸಲು, ಪ್ರಸರಣಾ ಮಾರ್ಗವನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ, ಕೆಳಕಂಡ ನವೀನ ತಂತ್ರಜ್ಞಾನ ಕ್ರಮಗಳನ್ನು ಕೈಗೊಳ್ಳುತ್ತಿದೆ:

- ಪ್ರಸರಣಾ ಗೋಪುರಗಳ ಎತ್ತರವನ್ನು ಹೆಚ್ಚಿಸುವುದು (Increasing tower height).
- ಪ್ರಸರಣ ಮಾರ್ಗದ ಅಂತರವನ್ನು ಕಡಿಮೆಗೊಳಿಸುವುದು (Reducing span at appropriate places)
- ಮಾರ್ಗವನ್ನು ಅಳವಡಿಸಲು Drone technology ಬಳಸುವುದು.

ಈ ಮೇಲಿನ ಕ್ರಮಗಳಿಂದ, ಈ ಹಿಂದೆ ಪ್ರಸ್ತಾಪಿಸಿದ್ದ 1,78,356 ಮರಗಳ ಬದಲಿಗೆ 1,28,913 ಮರಗಳನ್ನು ತೆರವುಗೊಳಿಸಬೇಕಾಗಿದ್ದು ಒಟ್ಟು 48,443 ಮರಗಳು ರಕ್ಷಿಸಲ್ಪಡುತ್ತದೆ.

ಮುಂದುವರೆದು, ಮಾರ್ಗ ಹಾದುಹೋಗುವ ಸ್ಥಳ ಬದಲಾವಣೆ (Line deviation) ಬಗ್ಗೆ ಹಾಗೂ Overhead Line ಬದಲಿಗೆ Under-ground cable ಅಳವಡಿಸಬೇಕಾದಲ್ಲಿ, ತಾಂತ್ರಿಕ ಕಾರ್ಯಸಾಧ್ಯತೆ ಮತ್ತು ಆರ್ಥಿಕ ಪರಿಣಾಮಗಳ ಸಾಧ್ಯಾಸಾಧ್ಯತೆಗಳ ಬಗ್ಗೆ ಕೇಂದ್ರ ಸರ್ಕಾರವು ಪರಾಮರ್ಶಿಸಿ ನಿರ್ಧರಿಸಬೇಕಾಗಿದ್ದು, ಯೋಜನೆಯ ಯಾವುದೇ ಬದಲಾವಣೆಯ ಬಗ್ಗೆ ನಿರ್ಧರಿಸುವುದು ರಾಜ್ಯ ಸರ್ಕಾರದ ವ್ಯಾಪಿಗೆ ಬರುವುದಿಲ್ಲ.

ಸಂಖ್ಯೆ: ಎನರ್ಜಿ 368 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು